**ಸಾಕ್ಷಿಗೆ ದಿನಾಂಕಃ07-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**::ಮುಂದುವರಿದ ಪಾಟೀ ಸವಾಲು::1 ನೇ ಎದುರುದಾರರ ಪರ ಶ್ರೀ. H.R.U ವಕೀಲರಿಂದ::**

ನನ್ನ ತಂದೆಯ ಮನೆ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಹೋಬಳಿಯ ಮಲ್ಲಾಪುರ ಗ್ರಾಮ ಎಂದರೆ ಸರಿ. ಮಲ್ಲಾಪುರ ಗ್ರಾಮದಲ್ಲಿರುವ ನನ್ನ ತಂದೆಯ ಆಸ್ತಿಗಳು ನನಗೆ ಮತ್ತು ನನ್ನ ಸಹೋದರನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿರುವ ಆಸ್ತಿಗಳು ಪೌತಿ ನಂತರ ನನ್ನ ಮತ್ತು ನನ್ನ ಸಹೋದರನ ಹೆಸರಿನಲ್ಲಿ ಸದರಿ ಆಸ್ತಿಗಳ ಕಂದಾಯ ದಾಖಲೆಗಳು ನಮೂದಾಗಿದೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡ ತಿಮ್ಮಪ್ಪ ರವರಿಗೆ ನಾಗಶ್ರೀ ಎಂಬ ಮಗಳು ಜನಿಸಿರುತ್ತಾರೆ ಎಂದರೆ ಸರಿ. ನನ್ನ ಮಗಳು ನಾಗಶ್ರೀ ವಯಸ್ಕಳಾಗಿರುತ್ತಾಳೆ ಎಂದರೆ ಸರಿ. ನನ್ನ ಮಗಳು ನಾಗಶ್ರೀ ಪ್ರಸ್ತುತ ಬೆಂಗಳೂರಿನಲ್ಲಿ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ನಿರ್ವಹಿಸುತ್ತಾ ಕೈತುಂಬಾ ಸಂಪಾದನೆ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ.

2. 1 ನೇ ಎದುರುದಾರರ ಮಾಲೀಕತ್ವದಲ್ಲಿ ವರಮಾನ ಬರುವ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರ ಮಾಲೀಕತ್ವದಲ್ಲಿ ಸ್ಥಿರಾಸ್ಥಿಗಳು ಇವೆ ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. 1 ನೇ ಎದುರುದಾರರ ಹೆಸರಿನಲ್ಲಿ ನಾನು ಹೇಳುವಂತೆ ಯಾವುದೇ ವರಮಾನ ಬರುವ ಸ್ಥಿರಾಸ್ಥಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಸುಮಾರು 78 ರಿಂದ 80 ವರ್ಷದ ಪ್ರಾಯದವರು ಎಂದರೆ ಸರಿ. 1 ನೇ ಎದುರುದಾರರು ಪಾಶ್ವವಾಯು ಕಾಯಿಲೆ ಇಂದ ಕಳೆದ 3 ವರ್ಷದಿಂದ ಬಳಲುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಪಾಶ್ವವಾಯು ಕಾಯಿಲೆ ಇಂದ ಬಳಲುತ್ತಿರುವುದರಿಂದ ಅವರು ತಮ್ಮ ದಿನನಿತ್ಯದ ಕಾರ್ಯಗಳಿಗೆ ಮತ್ತೊಬ್ಬರ ಮೇಲೆ ಅವಲಂಬಿತರಾಗಿದ್ದಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ಪಾಶ್ವವಾಯು ಕಾಯಿಲೆ ಬರುವ ಪೂರ್ವದಲ್ಲಿ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆ ಮತ್ತು ಹೃದಯ ಸಂಬಂಧಿ ಕಾಯಿಲೆ ಇಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ.

3. 1 ನೇ ಎದುರುದಾರರು ಸದರಿ ರೋಗಗಳಿಗೆ ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಪ್ರಸ್ತುತ ದಿನನಿತ್ಯ 700 ರಿಂದ 800 ರೂಪಾಯಿಗಳನ್ನು ತಮ್ಮ ಚಿಕಿತ್ಸಾ ವೆಚ್ಚಕ್ಕಾಗಿ ಭರಿಸುತ್ತಿದ್ದಾರೆ ಎಂದರೆ ಸರಿಯಲ್ಲ. 2016 ನೇ ಇಸವಿಯಲ್ಲಿ 1 ನೇ ಎದುರುದಾರರು ನೂತವಾಗಿ ನಿರ್ಮಿಸಿದ್ದ ಬೇಗಾರ್ ಗ್ರಾಮದಲ್ಲಿರುವ ಮನೆಗೆ ನಾನು ಮತ್ತು ಇತರರು ಅಕ್ರಮವಾಗಿ ಪ್ರವೇಶಿಸಿ ಆ ಮನೆಯ ಬಾಗಿಲಿನ ಬೀಗ ಒಡೆದು, ಅಲ್ಲೇ ಪ್ರಸ್ತುತ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ 1 ನೇ ಎದುರುದಾರರು ನನ್ನ ಮತ್ತು ಇತರರ ವಿರುದ್ಧ ಶೃಂಗೇರಿ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ ಎಂದರೆ ಸುಳ್ಳು ದೂರನ್ನು ದಾಖಲಿಸಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಪ್ರಕರಣದಲ್ಲಿ ನನ್ನನ್ನು ಮತ್ತು ಇತರರನ್ನು ಖುಲಾಸೆ ಮಾಡಿದ್ದಾರೆ ಎಂದು ನುಡಿಯುತ್ತಾರೆ.

4. 1 ನೇ ಎದುರುದಾರರು ನೂತವಾಗಿ ನಿರ್ಮಿಸಿದ್ದ ಬೇಗಾರ್ ಗ್ರಾಮದಲ್ಲಿರುವ ಮನೆಗೆ ನಾನು ಅಕ್ರಮವಾಗಿ ಪ್ರವೇಶಿಸಿ ಇಂದಿಗೂ ಸಹ ಅಲ್ಲಿಯೇ ವಾಸವಾಗಿರುವುದರಿಂದ 1 ನೇ ಎದುರುದಾರರಿಗೆ ವಾಸಿಸಲು ಯಾವುದೇ ಮನೆ ಇಲ್ಲ ಎಂದರೆ ಸಾಕ್ಷಿಯು 1 ನೇ ಎದುರುದಾರರು ಸದರಿ ಮನೆಗೆ ಬಂದು ನನ್ನ ಜೊತೆ ವಾಸ ಇದ್ದರೆ ನನ್ನ ಆಕ್ಷೇಪಣೆ ಇಲ್ಲ ಎಂದು ನುಡಿಯುತ್ತಾರೆ. ತದನಂತರ 1 ನೇ ಎದುರುದಾರರು ಶೃಂಗೇರಿಯ ಶಾರದಾ ನಗರದಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿದ್ದುಕೊಂಡು ಮೆಸ್ ನಲ್ಲಿ ಊಟ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2016 ನೇ ಇಸವಿಯಲ್ಲಿ 1 ನೇ ಎದುರುದಾರರು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಸಂದರ್ಭದಲ್ಲಿ ನಾನು ಸದರಿ 1 ನೇ ಎದುರುದಾರರು ಹೊಂದಿದ್ದ ಬೇಗಾರು ಕರ್ನಾಟಕ ಬ್ಯಾಂಕ್ ಶಾಖೆಯಲ್ಲಿ ಇದ್ದ 12,47,000/- ರೂ. ಗಳ ಪೈಕಿ 12,00,000/- ರೂ. ಗಳನ್ನು ಬ್ಯಾಂಕ್ ಅಧಿಕಾರಿಗಳ ಜೊತೆ ಶರೀಕಾಗಿ ಸದರಿ ಹಣವನ್ನು ಅಕ್ರಮವಾಗಿ ನಾನು ನನ್ನ ಖಾತೆಗೆ ಸದರಿ ಬ್ಯಾಂಕ್ ನಲ್ಲಿ ನಿಶ್ಚಿತ ಠೇವಣಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಇದೇ ವಿಚಾರವಾಗಿ ಸದರಿ ಬ್ಯಾಂಕ್ ನವರು ನನಗೆ ಹಣವನ್ನು ಬಿಡುಗಡೆ ಮಾಡಬಾರದು ಎಂದು ಕೋರಿ ಒ.ಎಸ್.ಸಂಖ್ಯೆ.12/2019 ರಂತೆ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಇದೇ ನ್ಯಾಯಾಲಯ ನನ್ನ ನಿಶ್ಚಿತ ಠೇವಣಿ ಖಾತೆಯಲ್ಲಿರುವ ಹಣವನ್ನು ಬಿಡುಗಡೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದೆ ಎಂದರೆ ಸರಿ. ಸದರಿ ದಾವೆ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ.

5. ಸದರಿ ಆದೇಶದ ವಿರುದ್ಧ ನಾನು ಸಲಿಸಿದ್ದ ಮೇಲ್ಮನವಿ ಸಹ ವಜಾಗೊಂಡಿರುತ್ತದೆ ಎಂದರೆ ಸರಿ. 1 ನೇ ಎದುರುದಾರರ ಮಗ ಸಂಪತ್ ಕುಮಾರ್ ಮತ್ತು ಮಗಳು ಜ್ಯೋತಿ ವಿಭಾಗ ಕೋರಿ ಒ.ಎಸ್ ಸಂಖ್ಯೆ 3/2023 ರಂತೆ ಹಿರಿಯ ಶ್ರೇಣಿ ನ್ಯಾಯಾಲಯ ಶೃಂಗೇರಿಯಲ್ಲಿ ದಾವಾ ಸಲ್ಲಿಸಿದ್ದಾರೆ ಎಂದರೆ ಸರಿ. 1 ನೇ ಎದುರುದಾರರು ವಯೋವೃದ್ಧರಾಗಿರುವುದರಿಂದ ಪ್ರಸ್ತುತ ಅವರು ಸ್ವಯಂ ದುಡಿದು ಮತ್ತೊಬ್ಬರನ್ನು ಸಾಕಿ ಸಲುಹಲು ಶಕ್ತ ರಾಗಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ:

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.